| ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು |
|---|

***ಎಸ್.ಸಿ.*** **137/2020**

| | | |
|---|---|---|
| ಸಾಕ್ಷಿದಾರರ ಹೆಸರು | ಃ **ಚಂದ್ರಶೇಖರ್** | *ಪ್ರಮಾಣ ಮಾಡಿದ ದಿನಾಂಕಃ* |
| ತಂದೆ ಹೆಸರು | ಃ **ಶಿವಣ್ಣ** | **17.11.2021** |
| ವಯಸ್ಸು | ಃ **24** ವರ್ಷ | |
| ವೃತ್ತಿ | ಃ **ಕಾರ್ ಚಾಲಕ** | **ಪಿಡಬ್ಲ್ಯೂ ಃ 05** |
| ವಾಸ ಸ್ಥಳ | ಃ **ಮೈಸೂರು** | **ಸಿಡಬ್ಲ್ಯೂ ಃ 04** |

***ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ***

**ನ್ಯಾಯಾಲಯದೆದುರು ಹಾಜರಿರುವ ಆರೋಪಿಯ ಪರಿಚಯ ಇದೆ. ನಾನು ಓಂಕಾರ್ ಕಾರ್ ಶೋರೂಂನಲ್ಲಿ ಚಾಲಕನಾಗಿ ಕೆಲಸ ಮಾಡುತ್ತಿದ್ದೇನೆ. ನಮ್ಮ ಶೋರೂಂ ಎದುರುಗಡೆ ತಳ್ಳುಗಾಡಿಯಲ್ಲಿ ಹಣ್ಣಿನ ವ್ಯಾಪಾರ ಮಾಡುತ್ತಿದ್ದ, ಚಾಸಾ-1ರವರ ಮನೆ ನಮ್ಮ ಶೋರೂಂನ ಪಕ್ಕದಲ್ಲಿ ಇದೆ. ಚಾಸಾ-5 ನಮ್ಮ ಶೋರೂಂನಲ್ಲಿ ಕೆಲಸ ಮಾಡುತ್ತಿದ್ದ, ದಿನಾಂಕ 22.08.2019ರಂದು ಸಂಜೆ 3ಃ30 ರಿಂದ 4ಃ30 ಗಂಟೆಯಲ್ಲಿ ಪ್ರಾಸಾ-1ರವರ ಮನೆಯ ಎದುರುಗಡೆ ಆರೋಪಿ ಗಾಡಿ ಇಟ್ಟುಕೊಂಡಿದ್ದ ಸ್ಥಳದಲ್ಲಿ ಮಹಜರ ಬರೆದಿದ್ದಾರೆ. ಆರೋಪಿ ಸದರಿ ಸ್ಥಳದಲ್ಲಿ ಹಳ್ಳ ತೆಗೆದು ಬಳೆಗಳನ್ನು ಮುಚ್ಚಿಟ್ಟಿದ್ದ ಅದನ್ನು ಆರೋಪಿ ಪೊಲೀಸರಿಗೆ ತೆಗೆದು ಕೊಟ್ಟಿರುತ್ತಾನೆ. ಸದರಿ ಚಿನ್ನದ ಬಳೆಗಳನ್ನು ಪೊಲೀಸರು ವಶಪಡಿಸಿಕೊಂಡು ಮಹಜರ ಬರೆದಿರುತ್ತಾರೆ. ಮಹಜರ ನಿಪಿ-13 ಎಂದು ಸಾಕ್ಷಿ ರುಜುವನ್ನು ನಿಪಿ-13(ಎ) ಎಂದು ಗುರುತಿಸಿದೆ. ಸದರಿ ಬಳೆಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳು ನಿಪಿ-6 ಮತ್ತು 7ರ ಫೋಟೋಗಳಲ್ಲಿ ಇರುತ್ತವೆ. ಚಾಸಾ-5 ಸಹ ಆ ಕಾಲಕ್ಕೆ ಹಾಜರಿದ್ದು ನಿಪಿ-13ಕ್ಕೆ ರುಜು ಮಾಡಿರುತ್ತಾನೆ. ಮಹಜರ ಸಮಯದಲ್ಲಿ ಫೋಟೋಗಳನ್ನು ತೆಗೆದಿದ್ದು, ಈಗ ತೋರಿಸಿದ ಫೋಟೋ ಸದರಿ ಫೋಟೋ ಇರುತ್ತದೆ. ಫೋಟೋ ನಿಪಿ-14 ಎಂದು ಗುರುತಿಸಿದೆ. ಇದರಲ್ಲಿ ನನ್ನ ಮತ್ತು ಚಾಸಾ-5ರವರ ಫೋಟೋಗಳು ಇರುತ್ತದೆ.**

**ಪಾಟೀ ಸವಾಲು : ಆರೋಪಿ ಪರ ವಕೀಲರಾದ ಶ್ರೀ ಕೆ.ಎಸ್.ಎಲ್.ರವರಿಂದಃ-**

**2. ನಾನು ಪ್ರತಿದಿನ 9:30 ರಿಂದ ರಾತ್ರಿ 8 ಗಂಟೆಯವರೆಗೆ ಕೆಲಸ ಮಾಡುತ್ತೇನೆ. ನಾನು ಕಾರ್ ಚಾಲಕ ಇರುತ್ತೇನೆ. ನಾನೂ ಈಗಲು ಇದೇ ಶೋರೂಂನಲ್ಲಿ ಕೆಲಸ ಮಾಡುತ್ತಿದ್ದೇನೆ. ನಾನು ಕೆಲಸಕ್ಕೆ ಹಾಜರಾದ ಬಗ್ಗೆ ಶೋರೂಂನಲ್ಲಿ ಹಾಜರಾತಿ ಪುಸ್ತಕ ಇಟ್ಟಿಲ್ಲ, ನಾನು ಸಾಮಾನ್ಯವಾಗಿ ಟೇಸ್ಟ್ ಡ್ರೈವ್‌ಗಳು ಇಲ್ಲದೇ ಇದ್ದಾಗ ಕಚೇರಿಯಲ್ಲಿಯೇ ಇರುತ್ತೇನೆ. ನಮ್ಮ ಕಚೇರಿಯ ಸಿಸಿಟಿವಿ ಸದಾಕಾಲ ಚಾಲನೆಯಲ್ಲಿರುತ್ತದೆ. ಮಹಜರನ್ನು 22ನೇ ತಾರೀಖಿನಂದು ಮಾಡಿರುತ್ತಾರೆ. 21ನೇ ತಾರೀಖು ನಾನು ರುಜು ಮಾಡಿಲ್ಲ. ಮಹಜರ ಸಮಯದಲ್ಲಿ ನಮ್ಮ ಶೋರೂಂ ಮಾಲೀಕರು ಕಚೇರಿಯಲ್ಲಿ ಇರಲಿಲ್ಲ. ಮಾಲೀಕರಿಗೆ ಪೊಲೀಸರು ಮಹಜರ ಬರೆಯಲು ಬಂದಿರುವ ಬಗ್ಗೆ ತಿಳಿಸಿಲ್ಲ. ನಾನು ನಮ್ಮ ಶೋರೂಂನಿಂದ ನೇರವಾಗಿ ಮಹಜರ ಸ್ಥಳಕ್ಕೆ ಹೋಗಿರುತ್ತೇನೆ. ನನ್ನ ಜೊತೆ ಚಾಸಾ-5 ಸಹ ಬಂದಿದ್ದ, ಮಹಜರ ಸಮಯದಲ್ಲಿ ಲಕ್ಷ್ಮಿಪುರಂ ಪೊಲೀಸರು, ಆರೋಪಿ, ನಾನು ಹಾಗೂ ಚಾಸಾ-5 ಇದ್ದೆವು. ಪೊಲೀಸರ ಹೆಸರು ಗೊತ್ತಿಲ್ಲ. 5 ರಿಂದ 6 ಜನ ಪೊಲೀಸರು ಬಂದಿದ್ದರು. ಅವರು ಹೆಸರು ಹಾಗೂ ಹುದ್ದೆ ಗೊತ್ತಿಲ್ಲ.**

**3. ಆರೋಪಿಯ ಹಣ್ಣಿನ ಅಂಗಡಿ ಸಾರ್ವಜನಿಕ ರಸ್ತೆಯ ಪಕ್ಕದಲ್ಲಿ ಇತ್ತು. ಅಂಗಡಿಯ ಪಕ್ಕದಲ್ಲಿ ಬಳೆಗಳನ್ನು ಹೂತಿಟ್ಟಿದ್ದ, ಪಕ್ಕದಲ್ಲಿ ಬೇರೆ ಹಣ್ಣಿನ ಅಂಗಡಿಗಳು ಇದ್ದವು. ರಸ್ತೆಯಲ್ಲಿ ವಾಹನ ಸಂಚಾರ ಇತ್ತು. ನಮ್ಮನ್ನು ಬಿಟ್ಟರೆ ಬೇರೆ ಯಾರೂ ಸ್ಥಳಕ್ಕೆ ಬಂದಿರಲಿಲ್ಲ. ಬಳೆಗಳನ್ನು ಪೊಲೀಸರು ತೆಗೆದುಕೊಂಡು ಆರೋಪಿಯನ್ನು ಕರೆದುಕೊಂಡು ಠಾಣೆಗೆ ಹೋಗಿರುತ್ತಾರೆ. ಬೇರೆ ಏನೂ ಮಾಡಿಲ್ಲ. ಆ ದಿನ ನಾನು ಠಾಣೆಗೆ ಹೋಗಿರಲಿಲ್ಲ. ಮಹಜರಗೆ ಠಾಣೆಯಲ್ಲಿ ರುಜು ಮಾಡಿದ್ದೇನೆ ಎಂದರೆ ಸರಿಯಲ್ಲ. ಸ್ಥಳದಲ್ಲಿಯೇ ಮಾಡಿರುತ್ತೇನೆ. ಪೊಲೀಸರು ಸ್ಥಳಕ್ಕೆ ಬಂದಿಲ್ಲ ಎನ್ನುವುದು, ಅಲ್ಲಿ ಆರೋಪಿ ಹಾಜರಿರಲಿಲ್ಲ ಎನ್ನುವುದು ಸರಿಯಲ್ಲ. ಪೊಲೀಸರಿಗೆ ಆರೋಪಿ ಯಾವುದೇ ಬಳೆಗಳನ್ನು ತೆಗೆದುಕೊಟ್ಟಿಲ್ಲ ಎನ್ನುವುದು, ಅಲ್ಲಿ ಪೊಲೀಸರು ಮಹಜರ ಬರೆದಿಲ್ಲ ಎನ್ನುವುದು ಸರಿಯಲ್ಲ. ನನಗೆ ಪ್ರಾಸಾ-1 ಪರಿಚಯ ಇದ್ದು, ಅವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.**

**4. ನಿಪಿ-14ರ ಫೋಟೋವನ್ನು ಸ್ಥಳದಲ್ಲಿ ತೆಗೆದಿಲ್ಲ ಎನ್ನುವುದು ಸರಿಯಲ್ಲ. ಇದನ್ನು ಬೇರೆ ಯಾವುದೇ ಜಾಗದಲ್ಲಿ ತೆಗೆದು ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ನಿಪಿ-14ರ ಫೋಟೋ ಜನಸಂದಣಿ ಇರುವ ಪ್ರದೇಶದಲ್ಲಿದೆ ಎಂದರೆ ಸರಿ. ಈ ಫೋಟೋದಲ್ಲಿ ಚಿನ್ನದ ಬಳೆಗಳು ಕಾಣಿಸುತ್ತಿಲ್ಲ ಎಂದರೆ ಸರಿ. ಕಲ್ಲಿನ ಅಡಿಯಲ್ಲಿತ್ತು ಎಂದು ಸಾಕ್ಷಿ ತಿಳಿಸಿದ್ದಾರೆ. ಪೊಲೀಸರು ಆರೋಪಿಯ ಕಡೆಯಿಂದ ಬಲವಂತವಾಗಿ ಕಲ್ಲನ್ನು ತೆಗೆಯುತ್ತಿರುವಂತೆ ಹೇಳಿ ಫೋಟೋವನ್ನು ಸೃಷ್ಟಿಸಿದ್ದಾರೆ ಎಂದರೆ ಸರಿಯಲ್ಲ. ಪೊಲೀಸರ ಒತ್ತಾಯದ ಮೇರೆಗೆ ನಾವು ಫೋಟೋ ತೆಗೆಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಫೋಟೋದಲ್ಲಿ ಹಳ್ಳ ಕಾಣಿಸುತ್ತಿಲ್ಲ ಎನ್ನುವುದು ಸರಿ. ಇದರಲ್ಲಿ ಯಾವುದೇ ಹಣ್ಣಿನ ಅಂಗಡಿ ಕಾಣಿಸುತ್ತಿಲ್ಲ ಎಂದರೆ ಸರಿ.**

**ಮರು ವಿಚಾರಣೆ ಮಾನ್ಯ ಸರ್ಕಾರಿ ಅಭಿಯೋಹಕರಿಂದಃ**

**5. ಮಹಜರ ಬರೆದ ದಿನಾಂಕ 21.08.2019 ಅಥವಾ 22.08.2019 ಎಂದರೆ ನನಗೆ ಖಚಿತ ವಾಗಿ ನೆನಪಿಲ್ಲ. ದಿನಾಂಕ 21.08.2019 ಇದ್ದರೂ ಇರಬಹುದು. ನನಗೆ ಸರಿಯಾಗಿ ದಿನಾಂಕ ನೆನಪಿಗೆ ಬಾರದ ಕಾರಣ 22ನೇ ತಾರೀಖು ಎಂದು ಹೇಳಿರುತ್ತೇನೆ.**

*ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.*

**ಓ ಹೇ ಕೇ ಸ ಇ ಎ ಒ.,**

**17.11.2021.**
(ಎಂ.ಎಲ್. ರಘುನಾಥ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.